**ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ**
**ಅಂಕೋಲಾ**

**ಸಿಸಿ ನಂಬರ 687/2025**

ಆರೋಪಿತನ ಹೆಸರುಃ ಶ್ರೀಮತಿ ನಾಗಮ್ಮ
ತಂದೆಯ ಹೆಸರುಃ ತೋಕು ಆಗೇರ
ವಯಸ್ಸುಃ 51
ಉದ್ಯೋಗಃ ಮುಖ್ಯಾಧಾಪಕಿ, ವಿ ಕೆ ಹೈಸ್ಕೂಲ್, ಅಂಕೋಲಾ
ವಿಳಾಸಃ ಸಾಃ ಸೂರ್ವೆ, ಬಾಸಗೋಡ, ತಾಃ ಅಂಕೋಲಾ

**ಪ್ರಕ್ರಿಯಾ ಸಂಹಿತೆ ಕಲಂ 313 ರೀತ್ಯಾ ಆರೋಪಿ ಹೇಳಿಕೆ**

ಪ್ರ 1: ನೀನು ಅಭಿಯೋಜನೆಯ ಪರ ಹಾಜರುಪಡಿಸಿರುವ ಸಾಕ್ಷಿಗಳ ಹೇಳಿಕೆ ಕೇಳಿದ್ದಿಯಾ?
ಉತ್ತರಃ

ಪ್ರ 2ಃ ಫಿರ್ಯಾದಿ ಪ್ರಥ್ವಿ ಸೌಹಾರ್ದ ಕ್ರೆಡಿಟ್ ಸಹಕಾರಿ ನಿಯಮಿತ, ಶಾಖೆಃ ಅಂಕೋಲಾ, ಇದರ ಸಾಲ ವಸೂಲಾತಿ ಅಧಿಕಾರಿ ಆದ ಪಿಡಬ್ಲ್ಯೂ 1- ದೇವಾನಂದ ಬೊಮ್ಮಯ್ಯ ನಾಯಕ ಇವರು ತಮ್ಮ ಸಾಕ್ಷಿಯಲ್ಲಿ ಆರೋಪಿತಳು ದಿನಾಂಕಃ 25-01-2024 ರಂದು ಫಿರ್ಯಾದಿ ಸಂಸ್ಥೆಯಿಂದ ರೂ.2,90,000/- ಸಾಲವನ್ನು ವ್ಯವಹಾರದ ಸಲುವಾಗಿ ಪಡೆದಿದ್ದು ಇರುತ್ತದೆ . ಆರೋಪಿತಳು ವ ಜಾಮಿನುದಾರರು ಒಪ್ಪಿ ಎಲ್ಲಾ ಸಾಲ ಪತ್ರಗಳಿಗೆ ಮತ್ತು ಕರಾರಿಗೆ ಮತ್ತು ಜಾಮೀನು ಪತ್ರಕ್ಕೆ ಸಹಿ ಮಾಡಿಕೊಟ್ಟಿರುತ್ತಾರೆ. ಸದರಿ ಸಾಲದ ಕರಾರುಗಳ ಪ್ರಕಾರ ಸಾಲದ ಹಣವನ್ನು ಮರುಪಾವತಿ ಮಾಡಿಸುವಷ್ಟು ಹಣ ಇದೆ ಎಂದು ನಂಬಿಸಿ ರೂ.3,20,611/- ಹಣ ತುಂಬುವುದು ಬಾಕಿ ಇದ್ದಾಗ, ಆರೋಪಿತಳು ದಿನಾಂಕಃ 31-08-2024 ರಂದು ತಾನು ಅಂಕೋಲಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್, ಶಾಖೆಃ ಅಂಕೋಲಾ ರವರಲ್ಲಿ ಹಣದ ಉಳಿತಾಯ ಖಾತೆ ಅಡಿಯಲ್ಲಿ ಚೆಕ್ ನಂಬರ 704702 ನ್ನು ರೂ.3,20,611/-ಕ್ಕೆ ನೀಡಿರುತ್ತಾರೆ. ಸದರಿ ಆರೋಪಿತಳು

ನೀಡಿದ ಚೆಕ್ಕು ಖಾತೆಯಲ್ಲಿ **“Funds Insufficient**" ಎಂದು ಹಿಂಬರಹದೊಂದಿಗೆ ಪರತ್ ಬಂದಿರುತ್ತದೆ. ಈ ಕುರಿತಾಗಿ ಆರೋಪಿತಳಿಗೆ ಮುಂಚಿತವಾಗಿ ನೋಟೀಸು ನೀಡಿದರೂ ಸಹ ಹಣ ಮರು ಪಾವತಿಸದೇ ಎನ್ ಐ ಆ್ಯಕ್ಟ್ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ 3ಃ ಈ ಪ್ರಕರಣದಲ್ಲಿ ಮತ್ತೇನಾದರೂ ಹೇಳುವುದಿದೆಯಾ?

ಉತ್ತರಃ

ಪ್ರ 4ಃ ನಿಮ್ಮ ಪರವಾಗಿ ಸಾಕ್ಷಿ ಮಾಡಿಸುತ್ತೀರಾ ಹಾಗೂ ಏನಾದರೂ ಕಾಗದ ಪತ್ರವನ್ನು ಹಾಜರುಪಡಿಸುತ್ತೀರಾ ?

ಉತ್ತರಃ

( ಆರೋಪಿತಳಿಗೆ ಮೇಲಿನ ಪ್ರಶ್ನೆಗಳನ್ನು ಆಕೆಗೆ ತಿಳಿಯುವ ಭಾಷೆಯಲ್ಲಿ ವಿವರಿಸಲಾಗಿ ಅವರು ಕೊಟ್ಟಿರುವ ಉತ್ತರವನ್ನೇ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು.)

ದಿನಾಂಕಃ 22/12/2025. Sd/-

**ಹೆ. ಪ್ರ ದ ನ್ಯಾದಂ, ಅಂಕೋಲಾ.**